ವಿತ್ತ ಸಂಚಿಕೆ
MARCH 2024


# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಒಂದು ಉದ್ಯಮದಲ್ಲಿ ಮೊದಲು ಆದ್ಯತೆ ಮತ್ತು ಮೌಲ್ಯ ಸಿಗಬೇಕಾದುದು ಹಣಕ್ಕೆ.
——ನಿತಿನ್ ಕಾಮತ್



ಶ್ರೇಷ್ಠತೆ, ಸಮಯ ಪ್ರಜ್ಞೆ ಮತ್ತು ಶಿಸ್ತು ಇವು ಮೂರು ಯಾವುದೇ ಉದ್ಯಮದ ಯಶಸ್ಸಿನ ಸೂತ್ರಗಳು
–ಡಾ.ಆರ್.ಎಸ್.ಸೋಧಿ



ಒಳ್ಳೆಯ ಸಂಗತಿಗಳು ಸಂಭವಿಸಬೇಕಾದರೆ ಕೇವಲ ಬಯಕೆಗಳಿದ್ದರೆ ಸಾಲದು. ಅದಕ್ಕೆ ತಕ್ಕ ಅರ್ಹತೆಯೂ ಇರಬೇಕು
–ಡಾ.ಪವನ್ ಗೋಯೆಂಕಾ.

# ಯುವಕರಿಗೆ ಬೇಕು ಹಣದ ಟಿಪ್ಸ್

ಅವರಿಗೆ ಮುನ್ನುಗ್ಗುತ್ತಿರುವ ಜಗತ್ತಿನ ವಿಚಾರದಲ್ಲಿ ಅಪಾರವಾದ ಮಾಹಿತಿಯಿದೆ.ಸಂಪರ್ಕ–ಸಂವಹನದಲ್ಲಿ ಅವರ ತಾಕತ್ತು ಕೂಡ ದೊಡ್ಡದು. ಹವ್ಯಾಸಗಳು ಮತ್ತು ಆದ್ಯತಾ ಕ್ಷೇತ್ರಗಳೊಂದಿಗೆ ಅವರು ತಾರುಣ್ಯಕ್ಕೆ ದಾಪುಗಾಲು ಹಾಕಿದ್ದಾರೆ. ಅವರನ್ನೇ ನಾವು ಜನರೇಶನ್–ಝಡ್ ಎಂದು ಕರೆಯುವುದು.

ವಿಶ್ವಸಂಸ್ಥೆಯ 2022ರ ಜಾಗತಿಕ ಜನಸಂಖ್ಯಾ ಚಿತ್ರಣದ ಪ್ರಕಾರ ಭಾರತದಲ್ಲಿರುವ ಶೇ.50ಕ್ಕೂ ಹೆಚ್ಚಿನ ಜನಸಂಖ್ಯೆ 25 ವರ್ಷಕ್ಕಿಂತ ಕೆಳಗಿನವರು.ಶೇ.65ರಷ್ಟು ಜನಸಂಖ್ಯೆ 35 ವರ್ಷ ವಯಸ್ಸಿಗಿಂತ ಕೆಳಗಿನವರು.ಅಂದರೆ ನಮ್ಮ ದೇಶದ ಭವಿಷ್ಯ ಇರುವುದು ಈ ಯುವಕರ ಕೈಯಲ್ಲಿ ಎನ್ನುವುದು ಸ್ಪಷ್ಟ.ಈ ತಲೆಮಾರೇ ಜನರೇಶನ್–ಝಡ್.(1997 ಮತ್ತು 2012ರ ನಡುವೆ ಜನಿಸಿದವರು).ಈ ಯುವ–ವಯಸ್ಕರು ಈಗಷ್ಟೇ ತಮ್ಮ ವೃತ್ತಿಜೀವನವನ್ನು ಆರಂಭ ಮಾಡಿದ್ದಾರೆ ಅಥವಾ ತಮ್ಮ ಉದ್ಯೋಗದ ಆರಂಭಿಕ ಹಂತಗಳಲ್ಲಿ ಇದ್ದಾರೆ.



**ಕಠಿಣ ಪರಿಶ್ರಮದಿಂದ ಗಳಿಸಿದ ಹಣ ಹೂಡಿಕೆ ಮಾಡುವ ಹೊತ್ತಿನಲ್ಲಿ ತಾಳ್ಮೆ, ಬದ್ಧತೆ ಮತ್ತು ಶಿಸ್ತು ಅಗತ್ಯ. ಎಲ್ಲಕ್ಕಿಂತ ಮುಖ್ಯವಾಗಿ ಹಣಕಾಸು ಮಾರ್ಗದರ್ಶಕರ ಸಲಹೆ ಅತ್ಯಗತ್ಯ.**

ಈ ಜನರೇಶನ್ ಝಡ್ ಹಣಕಾಸು ವಿಚಾರದಲ್ಲಿ ಹಿಂದಿನ ತಲೆಮಾರುಗಳಿಗಿಂತ ಹೆಚ್ಚು ಸೂಕ್ಷ್ಮವಾಗಿದ್ದಾರೆ ಎನ್ನುತ್ತದೆ 2022ರ ಇನ್‌ವೆಸ್ಟೋಪೀಡಿಯಾ ಹಣಕಾಸು ಸಾಕ್ಷರತಾ ಸಮೀಕ್ಷೆ.ಆದರೆ ಈ ತಲೆಮಾರಿನವರಿಗೆ ತಕ್ಷಣದ ಪ್ರತಿಫಲ ಬೇಕು. ಹಾಗಾಗಿ ಅವರು ಅತ್ಯಂತ ಅಪಾಯಕಾರಿ ಹೂಡಿಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ಊಹಾತ್ಮಕ ಹೂಡಿಕೆಗಳಲ್ಲಿ ಅವರಿಗೆ ಆಸಕ್ತಿ ಜಾಸ್ತಿ.ಈ ಊಹಾತ್ಮಕ ಟ್ರೇಡಿಂಗ್ ಸಾಧನವು ಸಂಪತ್ತು ಸೃಷ್ಟಿಸುವ ಪಯಣದಲ್ಲಿ ವಿನಾಶಕಾರಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಒಳ ಪುಟ ನೋಟ

ಹಣಕಾಸು ಗುರಿಗಳಿಗೆ ಒಂದೇ ಗುಳಿಗೆ–ಮ್ಯುಚ್ಯುಯಲ್ ಫಂಡ್ 3

ಆರೋಗ್ಯ ವಿಮೆಯಲ್ಲಿ ಸುಧಾರಣೆಯ ಪರ್ವ 5





ಸೆಬಿ ವರದಿಯ ಪ್ರಕಾರ 20ರಿಂದ 30 ವರ್ಷ ವಯಸ್ಸಿನ ಯುವಕರು ವೈಯಕ್ತಿಕ ಟ್ರೇಡಿಂಗ್‌ನಲ್ಲಿ ಭಾಗಿಯಾಗುತ್ತಿರುವ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. ಹಣಕಾಸು ವರ್ಷ 2019ರಲ್ಲಿ ಶೇ.11ರಷ್ಟಿದ್ದ ಈ ಪ್ರಮಾಣ 2022ರ ಹೊತ್ತಿಗೆ ಶೇ.36ಕ್ಕೆ ಜಿಗಿತ ಕಂಡಿದೆ. ಹಾಗಾಗಿ ಈಕ್ವಿಟಿ ಫ್ಯೂಚರ್‌ಗಳು ಮತ್ತು ಆಪ್ಶನ್‌ಗಳಲ್ಲಿ ಮಾಡಿದ ಹೂಡಿಕೆಗಳಲ್ಲಿ ಶೇ.89ರಷ್ಟು ನಷ್ಟ ಅನುಭವಿಸಿದ್ದಾರೆ ಎನ್ನುತ್ತದೆ ವರದಿ.

ಕಠಿಣ ಪರಿಶ್ರಮದಿಂದ ಗಳಿಸಿದ ಹಣವನ್ನು ಹೂಡಿಕೆ ಮಾಡುವ ಹೊತ್ತಿನಲ್ಲಿ ತಾಳ್ಮೆ, ಬದ್ಧತೆ ಮತ್ತು ಶಿಸ್ತು ಅಗತ್ಯ.ಎಲ್ಲಕ್ಕಿಂತ ಮುಖ್ಯವಾಗಿ ಇಂತಹ ಹೊತ್ತಿನಲ್ಲಿ ಕಾಲಕಾಲಕ್ಕೆ ಹಣಕಾಸು ಮಾರ್ಗದರ್ಶಕರಿಂದ ಸಲಹೆಗಳನ್ನು ಪಡೆದುಕೊಳ್ಳುವುದು ಹಾಗೂ ವಿಳಂಬಿತ ಫಲಿತಾಂಶಗಳಲ್ಲಿ ನಂಬಿಕೆ ಇಡುವುದು ಅತ್ಯಗತ್ಯ.ಇಂತಹ ಸಂದರ್ಭದಲ್ಲಿ ಹೊಸ ಹೂಡಿಕೆದಾರರು ತಮ್ಮ ಹೆಚ್ಚುವರಿ ಹಣವನ್ನು ಸುರಕ್ಷಿತವಾಗಿ ಹೂಡಿಕೆ ಮಾಡಲು ಮತ್ತು ತಮ್ಮ ಹಣಕಾಸಿನ ಹರಿವನ್ನು ನಿಭಾಯಿಸಲು ಹಾಗೂ ಸಂಪತ್ತನ್ನು ಸೃಷ್ಟಿಸಲು ಅನುಸರಿಸಬೇಕಾದ ಕೆಲವು ಸಲಹೆಗಳನ್ನು ಇಲ್ಲಿ ನೀಡಲಾಗಿದೆ.

**ಗುರಿಗಳಿರಲಿ:** ಯಾವುದೇ ಪ್ರಯತ್ನದಲ್ಲಿ ಫಲ ಪ್ರಾಪ್ತಿಯಾಗಬೇಕಾಗಿದ್ದರೆ ಮುಖ್ಯವಾಗಿ ಗುರಿಗಳನ್ನು ನಿಗದಿಪಡಿಸಿರಬೇಕು. ಅದು ಒಂದು ಫುಟ್ಬಾಲ್ ಆಟ ಇರಲಿ ಅಥವಾ ಹೂಡಿಕೆ ಇರಲಿ, ಗುರಿಗಳು ಮುಂದಿನ ಆಟದ ಯೋಜನೆಯನ್ನು ರೂಪಿಸುತ್ತದೆ ಮತ್ತು ನಿಮ್ಮ ಪ್ರಯತ್ನಗಳಿಗೆ ಸರಿಯಾದ ನಿರ್ದೇಶನ ನೀಡುತ್ತದೆ. ಹೂಡಿಕೆಯನ್ನು ಮಾಡುವುದಕ್ಕೂ ಮೊದಲು ಹಣಕಾಸು ಗುರಿಗಳನ್ನು ನಿಗದಿ ಮಾಡುವುದು ಮುಖ್ಯ. ಇಂಗ್ಲಿಷ್‌ನಲ್ಲಿ ಹೇಳುವುದಾದರೆ ಈ ಗುರಿಗಳು ಸ್ಮಾರ್ಟ್ (SMART) ಆಗಿರಬೇಕು.ಇಲ್ಲಿ ಖಒಂಖಖಿನ ವಿಸ್ತೃತ ರೂಪವೇ ನಿರ್ದಿಷ್ಟ (specific), ಅಳತೆಗೆ ಸಿಕ್ಕಬಲ್ಲ (measurable), ಕೈಗೆಟುಕಬಲ್ಲ (attainable), ವಸ್ತುನಿಷ್ಠ (realistic) ಮತ್ತು ಕಾಲಮಿತಿಯನ್ನು ಹೊಂದಿದ (time-bound). ಇಂತಹ ಗುರಿಗಳನ್ನು ಹಾಕಿಕೊಳ್ಳುವುದರಿಂದ ಒಂದು ಕರಾರುವಕ್ಕಾದ ಯೋಜನೆ ರೂಪಿಸುವುದು ಮಾತ್ರವಲ್ಲದೆ ನಿಮ್ಮ ಹೂಡಿಕೆ ಪಯಣಕ್ಕೆ ದಿಕ್ಸೂಚಿಯಾಗುತ್ತದೆ.



**ಸೂಕ್ತ ಉತ್ಪನ್ನದ ಆಯ್ಕೆ:** ಹೂಡಿಕೆ ಮಾಡಲು ಮುಂದಾದಾಗ ನಿಮ್ಮ ಮುಂದೆ ಯಥೇಚ್ಛವಾದ ಆಯ್ಕೆಗಳು ಕಾಣಿಸುತ್ತವೆ. ಆದರೆ ನೀವು ಕಠಿಣ ಶ್ರಮದಿಂದ ಗಳಿಸಿದ ಹಣವನ್ನು ಈ ಉತ್ಪನ್ನಗಳಲ್ಲಿ ಹೂಡಿಕೆ ಮಾಡುವುದು ನಿಜಕ್ಕೂ ದೊಡ್ಡ ಸವಾಲು. ಅತ್ಯಂತ ಸುರಕ್ಷಿತವಾದ ನಿಶ್ಚಿತ ಠೇವಣಿ (ಎಫ್‌ಡಿ)ಗಳಿಂದ ಆರಂಭಿಸಿ ತೀರಾ ಅಪಾಯಕಾರಿಯಾದ ಊಹಾತ್ಮಕ ಸಾಧನಗಳು ಲಭ್ಯವಿರುತ್ತವೆ. ಆದರೆ ಅಪಾಯ ಮತ್ತು ಆದಾಯದ ನಡುವೆ ಸರಿಯಾದ ಸಮತೋಲನ ಕಾಯ್ದುಕೊಳ್ಳುವುದು ನಿಜವಾದ ಅಗತ್ಯ. ಹಾಗೆ ಮಾಡಿದರೆ ಮಾತ್ರ ತಕ್ಕುನಾದ ಸಂಪತ್ತನ್ನು ಸೃಷ್ಟಿಸಬಹುದು, ಜೊತೆಗೆ ಮಾನಸಿಕ ಶಾಂತಿಯನ್ನು ಕೂಡ. ನಿಮ್ಮ ಹಣಕಾಸು ಅಗತ್ಯಗಳು ಮತ್ತು ರಿಸ್ಕ್ ಪ್ರೊಫೈಲ್ ಆಧಾರದಲ್ಲಿ ಸೂಕ್ತ ಉತ್ಪನ್ನದ ಆಯ್ಕೆ ಮಾಡಿಕೊಳ್ಳಬಹುದು.

**ಸಾಲದ ಬಲೆಗೆ ಸಿಕ್ಕದಿರಿ:** ಸಾಲದ ಬಲೆ ಎನ್ನುವುದು ನಿಜಕ್ಕೂ ವಿಷ ವರ್ತುಲ. ಸಾಲ ಮಾಡುವುದು, ತಂದ ಸಾಲವನ್ನು ತೀರಿಸಲು ಹೋರಾಟ ನಡೆಸುವುದು ಮತ್ತು ಈಗಿನ ಪಾವತಿಗಳನ್ನು ಮಾಡಲು ಇನ್ನಷ್ಟು ಸಾಲವನ್ನು ಮಾಡುವುದು... ಇಂತಹ ತಾಕಲಾಟಗಳು ನಡೆಯುತ್ತಿರುತ್ತವೆ. ಸಾಲದ ಬಲೆ ಎಂದರೆ ನಿರಂತರ ಸುತ್ತುವ ವರ್ತುಲದಿಂದ ಹೊರಬರಲು ಸಾಧ್ಯವಾಗದೇ ಇರುವುದು.ಇದರಿಂದ ಇನ್ನಷ್ಟು ಹಣಕಾಸು ಸಂಕಷ್ಟ ಎದುರಾಗುತ್ತದೆ.ಸಾಮಾನ್ಯವಾಗಿ ಇಂತಹ ಸಾಲದ ಬಲೆಯೊಳಗೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಯಾಕೆಂದರೆ ಅವರು ಈಗಷ್ಟೇ ತಮ್ಮ ವೃತ್ತಿಜೀವನವನ್ನು ಆರಂಭಿಸಿರುತ್ತಾರೆ, ಖರ್ಚುಗಳು ಹೆಚ್ಚುತ್ತ ಸಾಗಿರುತ್ತವೆ. ಹಾಗಾಗಿ ಅವರು ಸಾಲಗಳನ್ನು ಆಯ್ಕೆ ಮಾಡಿಕೊಳ್ಳುವ ಜರೂರತ್ತಿಗೆ ಸಿಲುಕುತ್ತಾರೆ.ಎಲ್ಲಕ್ಕಿಂತ ಹೆಚ್ಚಾಗಿ ಐಷಾರಾಮಿ ಜೀವನಶೈಲಿಯನ್ನು ನಡೆಸುವ ಧಾವಂತದಲ್ಲಿ ಕ್ರೆಡಿಟ್ ಕಾರ್ಡ್‌ಗಳ ಮೊರೆಹೋಗುತ್ತಾರೆ.ನೀವು ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಲೇಬೇಕಾದ ಅಗತ್ಯ ಎದುರಾದಾಗ ಕೆಲವು ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕು; ಅವುಗಳನ್ನು ತರ್ಕಬದ್ಧವಾಗಿ ಬಳಸಬೇಕು, ಸಾಲದ ಬಳಕೆಯ ಅನುಪಾತವನ್ನು ಕಾಯ್ದುಕೊಳ್ಳಬೇಕು ಮತ್ತು ಸಕಾಲದಲ್ಲಿ ಪಾವತಿಗಳನ್ನು ಮಾಡಬೇಕು.ಇಲ್ಲಿ ಮಾಡುವ ತಪ್ಪುಗಳು ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಪ್ರತಿಕೂಲವಾದ ಪರಿಣಾಮವನ್ನು ಬೀರುತ್ತದೆ.ಭವಿಷ್ಯದಲ್ಲಿ ಸಾಲವನ್ನು ಪಡೆಯುವುದು ಕಷ್ಟವಾಗಬಹುದು. ಹಾಗಾಗಿ ಸಾಲದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವುದನ್ನು ತಪ್ಪಿಸಲು ಇಂತಹ ಸಾಲದ ತಪ್ಪುಗಳು ಆಗದಂತೆ ಎಚ್ಚರಿಕೆ ವಹಿಸಬೇಕು.

**ಬಜೆಟ್:** ಈ ಜನರೇಶನ್–ಝಡ್ ಜಗತ್ತಿನೊಂದಿಗೆ ಹೊಂದಿರುವ ಸಂಪರ್ಕ ವಿಶೇಷವಾದುದು.ಸದಾ ವರ್ಚುವಲ್ ವರ್ಲ್ಡ್‌ನಲ್ಲಿ ಅದು ತೇಲಾಡುತ್ತಿರುತ್ತದೆ. ಅತ್ಯಾಧುನಿಕ ತಂತ್ರಜ್ಞಾನದ ಅಪಾರ ಅರಿವನ್ನು ಹೊಂದಿರುವ ಈ ತಲೆಮಾರಿನ ಪ್ರತಿಯೊಬ್ಬರೂ ಡಿಜಿಟಲ್‌ಲೋಕದಲ್ಲಿ ಹಿಂದೆಂದಿಗಿಂತಲೂ ಅತ್ಯಂತ ನಿಕಟವಾಗಿದ್ದಾರೆ.ಈ ಕಾರಣಕ್ಕೆ ಇಲ್ಲೊಂದು ಅಪಾಯ ಕೂಡ ಇದೆ.ಇವರು ಇತರರ ಜೀವನಶೈಲಿಯೊಂದಿಗೆ ತಮ್ಮನ್ನು ಹೋಲಿಕೆ ಮಾಡಿಕೊಳ್ಳುವ ಅಪಾಯ ಜಾಸ್ತಿಯೇ ಆಗಿದೆ. ಹಾಗಾಗಿ ಅಲ್ಲಿನ ಅತಿಯಾಸೆಗಳಿಗೆ ಅವರು ಬಲಿಪಶು ಆಗಬಹುದು. ಹೊಸ ಟ್ರೆಂಡ್, ಹೊಸ ಅಭ್ಯಾಸಗಳನ್ನು ಮೊದಲು ಅನುಸರಿಸುವುದೇ ಈ ತಲೆಮಾರಿನ ಹುಡುಗರು. ಇವರ ನಡುವೆ ಹೆಚ್ಚು ಜನಪ್ರಿಯವಾಗಿರುವ ಹೊಚ್ಚಹೊಸ ಟ್ರೆಂಡ್ ಏನೆಂದರೆ ‘ಸಾಫ್ಟ್ ಸೇವಿಂಗ್.’ಇದರ ಸರಳಾರ್ಥವಿಷ್ಟೇ; ಈಗಿನ ಬದುಕನ್ನು ಅತ್ಯಂತ ಐಷಾರಾಮಿಯಾಗಿ ಕಳೆದುಬಿಡುವುದು ಮತ್ತು ಭವಿಷ್ಯಕ್ಕಾಗಿ ಕಿಂಚಿತ್ತಷ್ಟೇ ಉಳಿತಾಯ ಮಾಡುವುದು.ಇಂತಹುದೊಂದು ನಿಲುವು ಅವರ ಭವಿಷ್ಯದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕವಾಗಿ ಪರಿಣಮಿಸುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಇದರಿಂದಾಗಿ ಅವರ ಭವಿಷ್ಯದ ಹಣಕಾಸು ಗುರಿಗಳನ್ನು ಸಾಧಿಸಲು ಬಾಕಿ ಉಳಿದಿರುವುದು ಕಿಂಚಿತ್ತು ಮಾತ್ರ.ನಿಮ್ಮ ಅಪೇಕ್ಷಿತ ಜೀವನಶೈಲಿ ಮತ್ತು ಹಣಕಾಸು ಗುರಿಗಳಿಗೆ ಹಣವನ್ನು ಹಂಚಿಕೆ ಮಾಡುವುದರ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಅತ್ಯವಶ್ಯ.

**ಆರಂಭವಿರಲಿ ಬೇಗ:** ಸಂಪತ್ತಿನ ರಾಶಿಯನ್ನು ಸೃಷ್ಟಿಸಲೆಂದು ಹೊರಟಾಗ ಹೂಡಿಕೆಯನ್ನು ಬಹುಬೇಗ ಆರಂಭಿಸಿಬಿಡಬೇಕು. ಯಾವತ್ತು ನಿಮಗೆ ವೇತನದ ಮೊದಲ ಚೆಕ್ ಕೈಗೆ ಬಂದಿತೋ ಅಂದಿನಿಂದಲೇ ಹೂಡಿಕೆಗೆ ಹಣವನ್ನು ಎತ್ತಿಡುವುದು ಬುದ್ಧಿವಂತಿಕೆಯ ಲಕ್ಷಣ.ಗಳಿಕೆಯ ಆರಂಭದಲ್ಲಿಯೇ ಹೂಡಿಕೆ ಶುರುಮಾಡಿಕೊಂಡರೆ ಮತ್ತು ಅದನ್ನು ಸುದೀರ್ಘವಧಿಗೆ ನಿಗದಿಪಡಿಸಿದರೆ ಸಂಯೋಜನೆಯ ಶಕ್ತಿಯಿಂದಾಗಿ ಸಣ್ಣ ಹೂಡಿಕೆಗಳು ಕೂಡ ದೊಡ್ಡ ನಿಧಿಯಾಗಿ ಪರಿವರ್ತನೆಗೊಳ್ಳುವುದು ನಿಶ್ಚಿತ.ಉದಾಹರಣೆಗೆ 25 ವರ್ಷಗಳಷ್ಟು ಹಿಂದೆ ನೀವು ಸೆನ್ಸೆಕ್ಸ್ ಟಿಆರ್‌ಐನಲ್ಲಿ ಒಂದು ಲಕ್ಷ ರೂ. ಹೂಡಿಕೆ ಮಾಡಿದ್ದರೆ ಅದರ ಮೌಲ್ಯ ಇಂದು 34,89,772 ರೂ. ಆಗಿರುತ್ತದೆ.ಅಂದರೆ ಶೇ.15.26 ಫಿಖಖಖ (ವಿಸ್ತರಿತ ಆಂತರಿಕ ಆದಾಯ ದರ).ಆದರೆ ನೀವು ಹದಿನೈದು ವರ್ಷಗಳ ಹಿಂದೆ ಸೆನ್ಸೆಕ್ಸ್ ಟಿಆರ್‌ಐನಲ್ಲಿ ಒಂದು ಲಕ್ಷ ರೂ. ಹೂಡಿಕೆ ಮಾಡಿದ್ದರೆ ಅದರ ಮೌಲ್ಯ ಇಂದು 9,17,060 ರೂ. ಆಗಿರುತ್ತದೆ. ಹಾಗಾಗಿ ನಿಮ್ಮ ಹೂಡಿಕೆಯ ಪಯಣವನ್ನು ಸಾಧ್ಯವಾದಷ್ಟು ಬೇಗ ಆರಂಭಿಸುವುದು ಉತ್ತಮ.

(ಮೂಲ ಏಸ್ ಎಂಎಫ್. ಇಲ್ಲಿ ಪರಿಗಣಿಸಲಾದ ಹೂಡಿಕೆ ಅವಧಿಗಳೆಂದರೆ 1998ರ ಡಿಸೆಂಬರ್ 31ರಿಂದ 2023ರ 31 ಡಿಸೆಂಬರ್ ವರೆಗಿನ 25 ವರ್ಷಗಳು ಮತ್ತು 2008ರ ಡಿಸೆಂಬರ್ 31ರಿಂದ 2023ರ ಡಿಸೆಂಬರ್ 31ರ ವರೆಗಿನ 15 ವರ್ಷಗಳು.)

**ಎಸ್‌ಐಪಿಗಳ ಮೂಲಕ ಹೂಡಿಕೆ:** ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್‌ಐಪಿ ಅಥವಾ ವ್ಯವಸ್ಥಿತ ಹೂಡಿಕೆ ಯೋಜನೆಗಳು ಹೊಂದಿಕೆಯಾಗುವ, ವ್ಯವಸ್ಥಿತವಾದ, ಸ್ಥಿರವಾದ ಮತ್ತು ಶಿಸ್ತುಬದ್ಧವಾದ ಅವಕಾಶವನ್ನು ಒದಗಿಸುತ್ತವೆ. ಎಸ್‌ಐಪಿಗಳು ಕೈಗೆಟುವಷ್ಟು ಸುಲಭದ್ದಾಗಿದ್ದು ಹೂಡಿಕೆದಾರರು ಕೇವಲ 100 ರೂ. ಹೂಡಿಕೆಯಿಂದ ಇದನ್ನು ಆರಂಭಿಸಬಹುದಾಗಿದೆ. ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಎಸ್‌ಐಪಿಗಳನ್ನು ಮಾಡುವುದರಿಂದ ತಮ್ಮ ಗಳಿಕೆಯಲ್ಲಿನ ಸಣ್ಣ ಮೊತ್ತಗಳನ್ನು ಸುದೀರ್ಘಾವಧಿಯಲ್ಲಿ ಹೂಡಿಕೆ ಮಾಡಬಹುದು.ಇದರಿಂದ ತಮ್ಮ ಹಣಕಾಸು ಗುರಿಗಳನ್ನು ಸಾಧಿಸುವುದು ಮಾತ್ರವಲ್ಲದೆ ಸಂಪತ್ತನ್ನೂ ಕ್ರೋಢೀಕರಿಸಲು ಸಾಧ್ಯವಾಗುತ್ತದೆ.ಉದಾಹರಣೆಗೆ, 25 ವರ್ಷಗಳಷ್ಟು ಹಿಂದೆ ನೀವು ಮ್ಯುಚ್ಯುಯಲ್ ಫಂಡ್‌ಗಳಲ್ಲಿ 10000 ರೂ.ಎಸ್‌ಐಪಿ ಮಾಡಿದ್ದರೆ ಇಂದು ಅದರ ಮೌಲ್ಯ 27,759,841 ರೂ.ಆಗಿರುತ್ತಿತ್ತು.ಅಂದರೆ ಶೇ.15.26 ಫಿಖಖಖ.(ಮೂಲ ಏಸ್ ಎಂಎಫ್.ಸೆನ್ಸೆಕ್ಸ್ ಟಿಆರ್‌ಐ ಆದಾಯ.1999ರ ಜನವರಿ 10ರಿಂದ 31 ಡಿಸೆಂಬರ್ 31ರ ನಡುವಿನ 25 ವರ್ಷಗಳ ಅವಧಿಯನ್ನು

ಪರಿಗಣಿಸಲಾಗಿದೆ.)

**ಭಾವನಾತ್ಮಕ ಪೂರ್ವಗ್ರಹಗಳು:** ಯುವ ಹೂಡಿಕೆದಾರರು ಕೆಲವೊಮ್ಮೆ ಗುಂಪಿನ ಮನೋಭಾವಕ್ಕೆ ಹಾಗೂ ಕೈತಪ್ಪಿ ಹೋಗುವ ಭಯದೊಂದಿಗೆ ಹೂಡಿಕೆ ಮಾಡುತ್ತಿರುತ್ತಾರೆ. ಹೀಗೆ ಭಯ, ದುರಾಸೆಯಂತಹ ಪೂರ್ವಗ್ರಹಗಳ ಆಧಾರದಲ್ಲಿ ಹೂಡಿಕೆ ಮಾಡುವುದರಿಂದ ನಷ್ಟಕ್ಕೆ ಕಾರಣವಾಗುವುದು ಮಾತ್ರವಲ್ಲದೆ ಕೆಲವು ಸುವರ್ಣ ಅವಕಾಶಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ.ಹಾಗಾಗಿ ಹೂಡಿಕೆ ಮಾಡುವ ಸಂದರ್ಭದಲ್ಲಿ ಮೂಲಭೂತ ಅಂಶಗಳ ಕಡೆಗೆ ಹೆಚ್ಚು ಗಮನ ಹರಿಸಬೇಕು. ಹೂಡಿಕೆಯ ನಿಜವಾದ ಮಾರ್ಗಗಳು ಯಾವುವು, ಹೂಡಿಕೆಯ ಉದ್ದೇಶಗಳು ಮತ್ತು ಅದರ ಜೊತೆಗೇ ಇರುವ ಅಪಾಯಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

ತುರ್ತು ನಿಧಿ ಮತ್ತು ವಿಮಾ ಯೋಜನೆ: ಅನಿಶ್ಚಿತತೆ ನಮ್ಮ ಬದುಕಿನ ಅವಿಭಾಜ್ಯ ಅಂಗ. ಅಂತಹ ಅನಿಶ್ಚಿತತೆಗಳನ್ನು ಎದುರಿಸಲು ಯಾವತ್ತೂ ಸಿದ್ಧರಾಗಿರಬೇಕು.ಬದುಕಿನಲ್ಲಿ ಯಾವಾಗ ಪ್ರವಾಹ ಬಂದು ಅಪ್ಪಳಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಹಾಗಾಗಿ ವಿಮೆಗೆ ಮೊರೆ ಹೋಗುವುದರಿಂದ ಸಂಭವಿಸುವ ಅನಾಹುತಗಳಿಂದ ಪಾರಾಗಲು ಸಾಧ್ಯವಿದೆ.ಇದರ ಜೊತೆಗೆ ಒಂದು ತುರ್ತುನಿಧಿಯನ್ನು ಕೂಡ ಸಿದ್ಧಪಡಿಸಿ ಇಟ್ಟುಕೊಳ್ಳುವುದರಿಂದ ಬದುಕಿನ ಅನಿಶ್ಚಿತತೆಗಳಿಂದ ಪಾರಾಗಬಹುದು.ಹೀಗೆ ತುರ್ತುನಿಧಿಗೆ ಸಿದ್ಧತೆ ಹಾಗೂ ಸಾಕಷ್ಟು ವಿಮೆ ಸೌಲಭ್ಯ ಮಾಡಿಕೊಳ್ಳುವುದರಿಂದ ನಿಮ್ಮ ಸಂಪತ್ತು ಕಟ್ಟುವ ಜರ್ನಿಗೆ ಸುರಕ್ಷತೆ ದೊರೆಯುತ್ತದೆ ಮಾತ್ರವಲ್ಲದೆ ಅನಿರೀಕ್ಷಿತ ಸವಾಲುಗಳಲ್ಲಿ ಸಾಲದ ಮೊರೆ ಹೋಗುವುದು ತಪ್ಪುತ್ತದೆ.

**ತೆರಿಗೆ ಯೋಜನೆ:** ಈಗಷ್ಟೇ ವೃತ್ತಿಜೀವನಕ್ಕೆ ತೊಡಗಿಕೊಂಡ ಯುವಕರ ಹಣಕಾಸು ನಿರ್ವಹಣೆಯಲ್ಲಿ ತೆರಿಗೆ ಯೋಜನೆ ಎನ್ನುವುದು ಅತ್ಯಂತ ನಿರ್ಣಾಯಕ. ತೆರಿಗೆಯ ಸಂಕೀರ್ಣತೆಗಳು ಯಾವತ್ತೂ ಭಯಪಡಿಸುವುದು ಸಾಮಾನ್ಯ. ಅಂತಹ ಸಂದರ್ಭದಲ್ಲಿ ತೆರಿಗೆ ಕಾನೂನುಗಳ ಮೂಲಭೂತ ಅಂಶಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಲೆಕ್ಕಪರಿಶೋಧಕರು ಅಥವಾ ಹಣಕಾಸು ಸಲಹೆಗಾರರನ್ನು ಸಂಪರ್ಕಿಸುವುದು ಉತ್ತಮ.ಇದರಿಂದ ಅವರು ಹಣಕಾಸು ನಿರ್ವಹಣೆ ಮತ್ತು ತೆರಿಗೆ ಯೋಜನೆಯನ್ನು ದಕ್ಷವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

**ಬಾಟಮ್‌ಲೈನ್:** ಹೊಸ ತಲೆಮಾರು ವೃತ್ತಿಪರ ಜಗತ್ತಿಗೆ ತಮ್ಮ ಪಾದಾರ್ಪಣೆ ಮಾಡುವುದರೊಂದಿಗೆ ಹಣಕಾಸಿನ ಅನೇಕ ಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಬೇಕು. ಇದಕ್ಕೆ ಉತ್ತಮ ಹಣಕಾಸು ಯೋಜನೆಗಳನ್ನು ರೂಢಿಸಿಕೊಳ್ಳುವುದು ಸುರಕ್ಷಿತ ಹಾಗೂ ಸಮೃದ್ಧ ಭವಿಷ್ಯದ ದೃಷ್ಟಿಯಿಂದ ನಿರ್ಣಾಯಕ. ಮೇಲೆ ಪ್ರಸ್ತಾಪ ಮಾಡಿದ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಹಣಕಾಸು ನಿರ್ವಹಣೆಯಲ್ಲಿರುವ ಸಂಕೀರ್ಣತೆಯನ್ನು ಸಲೀಸಾಗಿ ದಾಟಲು ಸಾಧ್ಯವಾಗುತ್ತದೆ.ಜೊತೆಗೆ ಹಣಕಾಸು ಸಲಹೆಗಾರರ ಮಾರ್ಗದರ್ಶನ ಪಡೆಯುವುದು ಸ್ಥಿರವಾದ ಹಣಕಾಸು ಭವಿಷ್ಯವನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ.



## ಎಲ್ಲ ಹಣಕಾಸು ಗುರಿಗಳಿಗೆ ಒಂದೇ ಗುಳಿಗೆ

# ಮ್ಯುಚ್ಯುಯಲ್ ಫಂಡ್

**ಉಳಿತಾಯ** ಮತ್ತು ಹೂಡಿಕೆಯ ವಿಚಾರದಲ್ಲಿ ಬಹುತೇಕ ಭಾರತೀಯ ಹೂಡಿಕೆದಾರರಿಗೆ ರಚನಾತ್ಮಕವಾದ ನಿಲುವು ಇಲ್ಲ. ಅವರು ಉಳಿತಾಯ ಮಾಡಿದ ಮೊತ್ತವೇನಿದೆ ಅದು ಅವರ ವೆಚ್ಚ ಮಾಡಿದ ವಿಧಾನದಿಂದ ನಿರ್ಧರಿತವಾದುದೇ ಹೊರತು ಉಳಿತಾಯದ ಗುರಿಯಿಂದ ಅಲ್ಲ. ಇದೇ ರೀತಿಯಲ್ಲಿ ಸಾಕಷ್ಟು ಮಂದಿ ಬೇಕಾಬಿಟ್ಟಿಯಾಗಿ ಹೂಡಿಕೆ ಮಾಡುತ್ತಾರೆ.ಅವರ ಬಳಿ ಕೈತುಂಬಾ ಹಣವಿದ್ದಾಗ ಅವರು ಯಾವುದೇ ನಿರ್ದಿಷ್ಟ ಗುರಿ ಇಲ್ಲದೆ ಬಾಂಡ್‌ಗಳು, ಷೇರು, ಅಂಚೆ ಕಚೇರಿ ಸಣ್ಣ ಉಳಿತಾಯ ಯೋಜನೆಗಳು, ಬ್ಯಾಂಕ್ ನಿಶ್ಚಿತ ಠೇವಣಿ ಇತ್ಯಾದಿಗಳಲ್ಲಿ ಹೂಡಿಕೆ ಮಾಡುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಗೂ ಆತನದ್ದೆ ಆದ ಹಣಕಾಸು ಗುರಿಗಳಿರುತ್ತವೆ. ಅದು ಅವರ ಅಗತ್ಯಗಳಿಗೆ ತಕ್ಕಂತೆ ವಿಶೇಷವಾಗಿರುತ್ತದೆ.ಇಂತಹ ಗುರಿಗಳಲ್ಲಿ 12–15 ತಿಂಗಳ ಬಳಿಕ ವಿದೇಶದಲ್ಲಿ ರಜಾ ದಿನಗಳನ್ನು ಕಳೆಯುವ ಅಲ್ಪಾವಧಿಯದ್ದಾಗಿರಬಹುದು ಅಥವಾ ನಾಲ್ಕು ವರ್ಷಗಳ ಬಳಿಕ ಸ್ವಂತ ಕಾರನ್ನು ಹೊಂದುವಂತಹ ಮಧ್ಯಮಾವಧಿ ಗುರಿಯಾಗಿರಬಹುದು.ಇನ್ನು ಉಳಿದವರಿಗೆ ತಮ್ಮ ಮೂರು ವರ್ಷದ ಮಗುವಿನ ಉನ್ನತ ಶಿಕ್ಷಣಕ್ಕೆ ಸುದೀರ್ಘಾವಧಿ ಹಣದ ಯೋಜನೆ ರೂಪಿಸುವುದು ಅಥವಾ ಹಣಕಾಸು ಸುರಕ್ಷಿತವಾದ ನಿವೃತ್ತಿಯನ್ನು ಹೊಂದುವುದು ಸೇರಿರುತ್ತದೆ.

ನಿಮ್ಮ ಅಗತ್ಯಗಳು ಏನೇ ಇರಬಹುದು, ಅವುಗಳನ್ನೆಲ್ಲ ಈಡೇರಿಸುವಂತಹ ಮ್ಯುಚ್ಯುಯಲ್ ಫಂಡ್ ಯೋಜನೆಗಳು ಇದ್ದೇ ಇವೆ. ನಿಮ್ಮ ಎಲ್ಲ ಹಣಕಾಸು ಗುರಿಗಳಿಗೆ ಇರಬಹುದಾದ ಒಂದೇ ಒಂದು ಪರಿಹಾರವೆಂದರೆ ಮ್ಯುಚ್ಯುಯಲ್ ಫಂಡ್‌ಗಳು. ಸಾಂಪ್ರದಾಯಿಕ ಅಥವಾ ಆಕ್ರಮಣಶೀಲ ಹೂಡಿಕೆದಾರರಾಗಿರಲಿ, ಅಲ್ಪಾವಧಿ ಅಥವಾ ದೀರ್ಘಾವಧಿ ಗುರಿಗಳಾಗಿರಲಿ, ಹೂಡಿಕೆಗೆ ಚಿಕ್ಕ ಅಥವಾ ದೊಡ್ಡ ಮೊತ್ತ ನಿಮ್ಮ ಬಳಿ ಇರಲಿ, ಪ್ರತಿಯೊಂದು ವಿಧದ ಹೂಡಿಕೆದಾರರಿಗೂ ಲಗತ್ತಾಗುವಂತಹ ಮ್ಯುಚ್ಯುಯಲ್ ಫಂಡ್ ಅವಕಾಶಗಳು ಇವೆ. ಹಾಗಾಗಿ ನಿಮ್ಮ ಹಣಕಾಸು ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಅನೇಕ ಹೂಡಿಕೆ ಉದ್ದೇಶಗಳನ್ನು ಹೊಂದಿದ ನಾನಾ ವಿಧದ ಮ್ಯುಚ್ಯುಯಲ್ ಫಂಡ್ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ನಾನಾ ವಿಧದ ಆಸ್ತಿಗಳಲ್ಲಿ ಹೂಡಿಕೆ ಮಾಡಲು ಅವಕಾಶವಾಗುವಂತೆ ಭಾರತದ ಮ್ಯುಚ್ಯುಯಲ್ ಫಂಡ್ ಕಂಪನಿಗಳಿಗೆ ಸೆಬಿ ಅನುವು ಮಾಡಿಕೊಟ್ಟಿದೆ. ಎಲ್ಲ ಆಕಾರ ಮತ್ತು ಗಾತ್ರಗಳಲ್ಲಿ ಮ್ಯುಚ್ಯುಯಲ್ ಫಂಡ್‌ಗಳು ಲಭ್ಯವಿವೆ. ಆದರೆ ನಿಮ್ಮ ಹಣಕಾಸು ಅಗತ್ಯಗಳಿಗೆ ತಕ್ಕಂತೆ ಸರಿಯಾದ ಮ್ಯುಚ್ಯುಯಲ್ ಫಂಡ್ ಯೋಜನೆಯನ್ನು ಆಯ್ಕೆ ಮಾಡುವುದು ನಿಜವಾದ ಸವಾಲು. ಯಾಕೆಂದರೆ ನಿಮ್ಮ ಮ್ಯುಚ್ಯುಯಲ್ ಫಂಡ್ ಹೂಡಿಕೆ ಉದ್ದೇಶಗಳು ಭಿನ್ನವಾಗಿರಬಹುದು.ಇವುಗಳಲ್ಲಿ ನಿಯಮಿತವಾದ ಆದಾಯವನ್ನು ಗಳಿಸುವುದು, ಸಂಪತ್ತನ್ನು

ಕ್ರೋಡೀಕರಿಸುವುದು ಅಥವಾ ಬಂಡವಾಳವನ್ನು ಕಾಯ್ದುಕೊಳ್ಳುವುದು ಕೂಡ ಸೇರಿದೆ. ಇಂತಹ ಗುರಿಗಳಿಗಾಗಿ ಹೂಡಿಕೆ ಮಾಡಲು ತಕ್ಕುನಾದ ಮ್ಯುಚ್ಯುಯಲ್ ಫಂಡ್ ಆಯ್ಕೆಗಳು ಹಾಗೂ ಕೆಲವು ಸಾಮಾನ್ಯ ಗುರಿಗಳು ಯಾವುವು ಎಂಬುದನ್ನು ನೋಡೋಣ:

**1.ನಿವೃತ್ತಿಯ ಅಗತ್ಯಗಳು:** ಈಗ ನಿಮ್ಮ ವಯಸ್ಸು 35 ವರ್ಷವಾಗಿದ್ದು ನೀವು 60ಕ್ಕೆ ನಿವೃತ್ತರಾಗುತ್ತಿದ್ದರೆ ನಿಮ್ಮ ಬಳಿ 25 ವರ್ಷಗಳಿವೆ. ಅಂದರೆ ನೀವು ಇದನ್ನು ಸುದೀರ್ಘಾವಧಿ ಯೋಜನೆಯನ್ನಾಗಿ ಮಾಡಿಕೊಳ್ಳಬಹುದು. ಈ ಗುರಿಯಲ್ಲಿ ಹೆಚ್ಚು ಸೂಕ್ತವಾದ ಮ್ಯುಚ್ಯುಯಲ್ ಫಂಡ್ ಯೋಜನೆ ಎಂದರೆ ವೈವಿಧ್ಯತೆಯಿಂದ ಕೂಡಿದ ಈಕ್ವಿಟಿ ಮ್ಯುಚ್ಯುಯಲ್ ಫಂಡ್ (ಇಡ–ಣುಣಥಿ ಊತಿಜಥಿಜಿಜಜ ಒಣಣಣಚಿಟ ಈಣಟಿಜ). ಇದರಲ್ಲಿ ಬಹುರೂಪದ ಹೂಡಿಕೆಗಳ ಮೂಲಕ ಸುದೀರ್ಘಾವಧಿಯ ಬಂಡವಾಳದ ಹೆಚ್ಚಳವನ್ನು ಸಾಧಿಸಬಹುದು. ಅಂದರೆ ಅನೇಕ ವಲಯಗಳಲ್ಲಿ ಫಂಡ್ ಹೂಡಿಕೆ ಮಾಡುವುದರಿಂದ ಅಪಾಯ ತಗ್ಗುತ್ತದೆ. ಇಷ್ಟು ಮಾತ್ರವಲ್ಲದೆ ಇದರಲ್ಲಿ ಅನೇಕ ಮ್ಯುಚ್ಯುಯಲ್ ಫಂಡ್ ಕಂಪನಿಗಳು ನಿವೃತ್ತಿ ಆಧಾರಿತ ಯೋಜನೆಗಳನ್ನು ಕೂಡ ನೀಡುತ್ತವೆ. ಇದರಿಂದ ನಿಮ್ಮ ನಿವೃತ್ತಿಯ ಅಗತ್ಯಗಳನ್ನು ಕೂಡ ಪೂರೈಸಿಕೊಳ್ಳಬಹುದು.

**2.ಮಕ್ಕಳ ಉನ್ನತ ಶಿಕ್ಷಣ ಅಥವಾ ಮದುವೆ:** ಮಕ್ಕಳ ಉನ್ನತ ಶಿಕ್ಷಣವನ್ನು ಕೂಡ ಸುದೀರ್ಘಾವಧಿ ಗುರಿ ಎಂದು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಇಲ್ಲಿನ ಕಾಲಮಿತಿ ನಿವೃತ್ತಿಗಿಂತ ಕಡಿಮೆ ಅವಧಿಯದ್ದಾಗಿರುತ್ತದೆ. ಈ ರೀತಿಯ ಅಗತ್ಯಗಳಿಗೆ ಅನುಗುಣವಾದ ಮ್ಯುಚ್ಯುಯಲ್ ಫಂಡ್ ವಿಭಾಗಗಳೆಂದರೆ ವೈವಿಧ್ಯತೆಯಿಂದ ಕೂಡಿದ ಈಕ್ವಿಟಿ ಮ್ಯುಚ್ಯುಯಲ್ ಫಂಡ್ (Equity Diversified Mutual Fund), ಸಮತೋಲಿತ ಪ್ರಯೋಜನದ ಫಂಡ್‌ಗಳು (Balanced Advantage Funds) ಮತ್ತು ಆಕ್ರಮಣಶೀಲ ಈಕ್ವಿಟಿ ಆಧಾರಿತ ಹೈಬ್ರೀಡ್ ಫಂಡ್‌ಗಳು (Aggressive Equity Oriented Hybrid Funds). ಇದಲ್ಲದೆ ಪರಿಹಾರ ಆಧಾರಿತ ಚಿಲ್ಡ್ರನ್ ಫಂಡ್ ಕೂಡ ಇದ್ದು ಇದು ಮಕ್ಕಳ ಉನ್ನತ ಶಿಕ್ಷಣ ಅಥವಾ ಮದುವೆಯಂತಹ ಭವಿಷ್ಯದ ಕಾರ್ಯಕ್ರಮಗಳಿಗೆ ಹಣದ ವ್ಯವಸ್ಥೆ ಮಾಡಲು ಅನುಕೂಲವಾಗುತ್ತದೆ. ಮಕ್ಕಳ ಉನ್ನತ ಶಿಕ್ಷಣಕ್ಕಿಂತ 15 ವರ್ಷಗಳಷ್ಟು ಹಿಂದೆಯೇ ಪ್ರತಿ ತಿಂಗಳು ಎಸ್‌ಐಪಿಯಲ್ಲಿ 5000 ರೂ. ಹೂಡಿಕೆ ಮಾಡಿದರೆ ಶೇ.12ರ ಆದಾಯದೊಂದಿಗೆ ನೀವು 23.79 ಲಕ್ಷ ರೂ. ಸಂಗ್ರಹ ಮಾಡಿರುತ್ತೀರಿ.

ಮೇಲೆ ಪ್ರಸ್ತಾಪ ಮಾಡಿದ ಮ್ಯುಚ್ಯುಯಲ್ ಫಂಡ್ ವಿಭಾಗಗಳಲ್ಲದೆ ಮಕ್ಕಳ ಮದುವೆಗೆ ಅಗತ್ಯವಾದ ಚಿನ್ನವನ್ನು ಖರೀದಿ ಮಾಡುವ ಸಲುವಾಗಿ ಗೋಲ್ಡ್ ಫಂಡ್‌ಗಳಲ್ಲಿಯೂ ಕೂಡ ಹೂಡಿಕೆ ಮಾಡಬಹುದಾಗಿದೆ.



**3.ತೆರಿಗೆ ಉಳಿತಾಯ:** ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೂಲಕ ತೆರಿಗೆ ಉಳಿತಾಯ ಮಾಡುವ ಆಯ್ಕೆಗಳು ಕೂಡ ಇವೆ. ಈಕ್ವಿಟಿ ಆಧಾರಿತ ಉಳಿತಾಯ ಯೋಜನೆಗಳು (ಇಎಲ್‌ಎಸ್‌ಎಸ್) ಇದಕ್ಕಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಆದಾಯ ತೆರಿಗೆ ಕಾಯ್ದೆಯ ಸೆ.80ಸಿ ಅಡಿಯಲ್ಲಿ ಒಂದು ಹಣಕಾಸು ವರ್ಷದಲ್ಲಿ 1.50 ಲಕ್ಷ ರೂ. ತನಕ ತೆರಿಗೆ ಉಳಿತಾಯ ಮಾಡುವ ಅರ್ಹತೆಗಳು ಇಎಲ್‌ಎಸ್‌ಎಸ್ ಹೂಡಿಕೆಗಳಿಂದ ಲಭ್ಯ. ಪಿಪಿಎಫ್, ಎನ್‌ಎಸ್‌ಸಿ, ಎನ್‌ಪಿಎಸ್ ಮತ್ತು ಐದು ವರ್ಷದ ಬ್ಯಾಂಕ್ ನಿಶ್ಚಿತ ಠೇವಣಿಗಳಂತಹ ಇತರ ಸುದೀರ್ಘಾವಧಿಯ ತೆರಿಗೆ ಉಳಿತಾಯ ಹೂಡಿಕೆಗಳಿಗೆ ಹೋಲಿಸಿದರೆ ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಗಣನೀಯವಾದ ಆದಾಯವನ್ನು ಪಡೆಯಬಹುದಾಗಿದೆ. ಹಾಗಾಗಿ ಇಎಲ್‌ಎಸ್‌ಎಸ್ ಫಂಡ್‌ಗಳು ತೆರಿಗೆ ಉಳಿತಾಯದ ಜೊತೆಗೆ ಸಂಪತ್ತು ಸೃಷ್ಟಿಯ ಎರಡು ಉದ್ದೇಶಗಳನ್ನು ಸಾಧಿಸಲು ಅವಕಾಶ ಮಾಡಿಕೊಡುತ್ತವೆ.

**4.ನಿಯಮಿತ ಆದಾಯ:** ಸುದೀರ್ಘಾವಧಿಗೆ ತಾವು ಮಾಡಿದ ಹೂಡಿಕೆಗಳಿಂದ ನಿಯಮಿತವಾಗಿ ನಗದು ಹರಿದು ಬರಲು ಇರುವ ಮಾರ್ಗವೆಂದರೆ ವ್ಯವಸ್ಥಿತ ಹಣ ವಾಪಸಾತಿ ಯೋಜನೆ (ಖಘಕ). ಎಸ್‌ಡಬ್ಲ್ಯುಪಿ ಮೂಲಕ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಹೆಚ್ಚಿನ ಮೊಬಲಗನ್ನು ಹೂಡಿಕೆ ಮಾಡಿದರೆ ನಿಯಮಿತವಾಗಿ ಹಣ ವಾಪಸು ಪಡೆಯುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಯೋಜನೆಯಲ್ಲಿ ಹೂಡಿಕೆದಾರರು ಮಾಸಿಕ ಆದಾಯವನ್ನು ಗಳಿಸುವುದರ ಜೊತೆ ಜೊತೆಗೇ ಅವಧಿ ಪೂರ್ಣಗೊಂಡಾಗ ಸಂಚಿತ ಮೊತ್ತವನ್ನು ಕೂಡ ಪಡೆದುಕೊಳ್ಳಬಹುದು. ಎಸ್‌ಡಬ್ಲ್ಯುಪಿಯಲ್ಲಿ ಸಮತೋಲಿತ ಪ್ರಯೋಜನದ ಫಂಡ್‌ನಂತಹ ಹೈಬ್ರೀಡ್ ಫಂಡ್‌ಗಳು ಉತ್ತಮ ಆಯ್ಕೆಗಳಾಗಿವೆ. ಯಾಕೆಂದರೆ ಈಕ್ವಿಟಿ ಫಂಡ್‌ಗಳಿಗೆ ಹೋಲಿಸಿದರೆ ಎಸ್‌ಡಬ್ಲ್ಯುಪಿಯಲ್ಲಿ ರಿಸ್ಕ್ ಕಡಿಮೆ.

**5.ಫಂಡ್‌ಗಳ ನಿಲುಗಡೆ:** ಸಾಮಾನ್ಯವಾಗಿ ಸುದೀರ್ಘಾವಧಿ ಹೂಡಿಕೆ ಆಯ್ಕೆಯನ್ನು ಮಾಡಿಕೊಳ್ಳುವ ಯುವ ಹೂಡಿಕೆದಾರರು ಅಲ್ಪಾವಧಿಯ ಏರಿಳಿತಗಳನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಹಾಗಾಗಿ ಅವರು ಆಕ್ರಮಣಕಾರಿ ಆಸ್ತಿ ಹಂಚಿಕೆಯಲ್ಲಿ ಪಾಲ್ಗೊಳ್ಳಬಹುದು. ಆದರೆ ಹೂಡಿಕೆದಾರ ನಿವೃತ್ತಿ ವಯಸ್ಸಿನ ಸನಿಹಕ್ಕೆ ಬಂದಾಗ ಸಾಂಪ್ರದಾಯಿಕ ಆಸ್ತಿ ಹಂಚಿಕೆಯ ಆಯ್ಕೆ ಉತ್ತಮ.

**6.ಇತರ ಗುರಿಗಳು:** ಮೇಲೆ ಪ್ರಸ್ತಾಪ ಮಾಡಿದ ಗುರಿಗಳನ್ನು ಹೊರತುಪಡಿಸಿ ಇನ್ನಿತರ ಯಾವುದೇ ಗುರಿಗಳು ಇದ್ದರೆ ಅದರ ಅವಧಿ ಮತ್ತು ರಿಸ್ಕ್ ಪ್ರೊಫೈಲ್‌ಗೆ ಅನುಗುಣವಾಗಿ ಅವುಗಳನ್ನು ವಿಭಾಗಗಳಾಗಿ ಮಾಡಿಕೊಳ್ಳಬಹುದು. ರಿಸ್ಕ್ ಪ್ರೊಫೈಲ್‌ಗೆ ತಕ್ಕಂತೆ ನಾನಾ ರೀತಿಯ ಮ್ಯುಚ್ಯುಯಲ್ ಫಂಡ್‌ಗಳು ಲಭ್ಯವಿವೆ. ನಿಜಕ್ಕೂ ನಿಮಗೆ ಅಪಾಯವನ್ನು ಎದುರಿಸುವ ಛಾತಿ ಇದ್ದರೆ ಈಕ್ವಿಟಿ ಮ್ಯುಚ್ಯುಯಲ್ ಫಂಡ್‌ಗಳ ಕಡೆಗೆ ಹೆಚ್ಚು ಆಸಕ್ತಿ ವಹಿಸಬಹುದು. ಇಂತಹ ರಿಸ್ಕ್‌ಗಳನ್ನು ಎದುರಿಸುವುದು ಬೇಡ ಎನ್ನುವುದಾದರೆ ಹೈಬ್ರೀಡ್ ಅಥವಾ ಡೆಟ್ ಮ್ಯುಚ್ಯುಯಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಎಲ್ಲಕ್ಕಿಂತ ಮುಖ್ಯವಾಗಿ, ನಮ್ಮ ಎಲ್ಲ ಅಗತ್ಯಗಳಿಗೆ ತಕ್ಕ ಫಂಡ್‌ಗಳು ನಮ್ಮ ಮುಂದೆ ಲಭ್ಯವಿವೆ–ಅಲ್ಪಾವಧಿ, ಮಧ್ಯಮಾವಧಿ ಅಥವಾ ಸುದೀರ್ಘಾವಧಿ. ಸುದೀರ್ಘಾವಧಿ ಗುರಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಾದರೆ ಶೇ.65ರಿಂದ 85ರ ತನಕ ಹೂಡಿಕೆ ಮಾಡಬಹುದಾದ ಈಕ್ವಿಟಿ ಅಥವಾ ಬಹುರೂಪದ ಈಕ್ವಿಟಿ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.ಮಧ್ಯಮಾವಧಿ ಗುರಿಗಳಾದರೆ 60:40ರ ಅನುಪಾತದಲ್ಲಿ ಸಮತೋಲಿತ ಅಥವಾ ಹೈಬ್ರೀಡ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

**ಬಾಟಮ್‌ಲೈನ್:** ಮ್ಯುಚ್ಯುಯಲ್ ಫಂಡ್‌ಗಳು ಅನೇಕ ಸ್ವರೂಪಗಳಲ್ಲಿ ಲಭ್ಯವಿವೆ. ಅಂದರೆ ಪ್ರತಿಯೊಬ್ಬರಿಗೂ ಮ್ಯುಚ್ಯುಯಲ್ ಫಂಡ್ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿದೆ. ರಿಸ್ಕ್ ತೆಗೆದುಕೊಳ್ಳುವ ನಿಮ್ಮ ಸಾಮರ್ಥ್ಯದ ಜೊತೆಗೆ ಹಣಕಾಸು ಗುರಿಗಳು ನಿಮಗೆ ಯಾವುದು ಉತ್ತಮ ಮ್ಯುಚ್ಯುಯಲ್ ಫಂಡ್ ಎಂಬುದನ್ನು ನಿರ್ಧರಿಸುತ್ತವೆ. ಇಷ್ಟೆಲ್ಲದರ ನಡುವೆಯೂ ನಿಮ್ಮ ಹೂಡಿಕೆ ಪಯಣದಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಮುಖ್ಯ.ಅಂತಹ ಸಂದರ್ಭದಲ್ಲಿ ಮ್ಯುಚ್ಯುಯಲ್ ಫಂಡ್ ವಿತರಕರು ಅಥವಾ ಹಣಕಾಸು ಸಲಹೆಗಾರರ ನೆರವನ್ನು ಪಡೆದುಕೊಳ್ಳುವುದು ಹೆಚ್ಚು ಶ್ರೇಯಸ್ಕರ.

# ಆರೋಗ್ಯ ವಿಮೆ: ಸುಧಾರಣೆ ಪರ್ವ



## ಎಲ್ಲೆಡೆ ನಗದು ರಹಿತ ವ್ಯವಸ್ಥೆ

**ಆರೋಗ್ಯ ವಿಮೆಯನ್ನು ಆಯ್ಕೆ ಮಾಡಿಕೊಳ್ಳಲು ಉತ್ತೇಜನ ನೀಡುವ ಉದ್ದೇಶದಿಂದ ಎಲ್ಲಾ ಆಸ್ಪತ್ರೆಗಳಲ್ಲಿ ನಗದು ರಹಿತ ವ್ಯವಸ್ಥೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯೂ ಆಗಲಿದೆ.**

**ಕಳೆದ** ಕೆಲವು ವರ್ಷಗಳಿಂದ ಭಾರತದಲ್ಲಿ ಆರೋಗ್ಯ ವಿಮೆ ವ್ಯಾಪಕ ಪ್ರಮಾಣದಲ್ಲಿ ಮತ್ತು ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿದೆ.ಇತ್ತೀಚೆಗೆ ಈ ಕ್ಷೇತ್ರದಲ್ಲಿ ಕೆಲವು ಸುಧಾರಣೆಗಳನ್ನು ತರಲಾಗಿದೆ.ಇದು ವಿಮಾ ಕ್ಷೇತ್ರದ ಭವಿಷ್ಯವನ್ನು ರೂಪಿಸಲಿದೆ ಎಂದು ನಿರೀಕ್ಷಿಸಲಾಗಿದ್ದು, ಇದರ ಫಲವನ್ನು ಈಗಿರುವ ಗ್ರಾಹಕರು ಕೂಡ ಪಡೆಯಲಿದ್ದಾರೆ.

ಇವುಗಳಲ್ಲಿ ಪ್ರಮುಖ ಸುಧಾರಣೆ ಎಂದರೆ ಎಲ್ಲಾದರೂ ನಗದುರಹಿತ ಸೌಲಭ್ಯ.ಇದು ಭಾರತದಲ್ಲಿನ ಆರೋಗ್ಯ ವಿಮಾ ಕ್ಲೈಮ್‌ಗಳ ಚಿತ್ರಣವನ್ನೇ ಬದಲಿಸಲಿದೆ.

**ಆರೋಗ್ಯ ವಿಮಾ ಕ್ಲೈಮ್‌ಗಳ ಪರಿಚಯ:** ಆರೋಗ್ಯ ವಿಮೆಯಲ್ಲಿ ಎರಡು ರೀತಿಯ ಕ್ಲೈಮ್‌ಗಳಿವೆ– ನಗದು ರಹಿತ ಮತ್ತು ಮರುಪಾವತಿ.

ಆರೋಗ್ಯ ವಿಮೆಯನ್ನು ಹೊಂದಿದ ವ್ಯಕ್ತಿಯೊಬ್ಬ ಆಸ್ಪತ್ರೆಗೆ ದಾಖಲಾದಾಗ ಆತನಿಗೆ ನಗದುರಹಿತ ಚಿಕಿತ್ಸೆ ಕೊಡಲು ಸಾಧ್ಯವೇ ಎಂದು ಆಸ್ಪತ್ರೆ ಪರಿಶೀಲನೆ ನಡೆಸುತ್ತದೆ.ಅಂದರೆ ಆಸ್ಪತ್ರೆಯು ವಿಮಾ ಕಂಪನಿಯೊಂದಿಗಿನ ಒಪ್ಪಂದದ ಅಡಿಯಲ್ಲಿ ಗ್ರಾಹಕನಿಂದ ಚಿಕಿತ್ಸೆಗೆ ಸಂಬಂಧಿಸಿದ ವೆಚ್ಚಗಳ ವಿವರಗಳನ್ನು ಕೇಳುತ್ತದೆ.ಇದಕ್ಕೆ ವಿಮಾ ಕಂಪನಿಯು ಒಪ್ಪಿದರೆ ಗ್ರಾಹಕನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಪಾವತಿ ಮಾಡಬೇಕಾದ ಅಗತ್ಯವಿರುವುದಿಲ್ಲ. ಇದನ್ನೇ ನಾವು ನಗದುರಹಿತ ಕ್ಲೈಮ್ ಎಂದು ಕರೆಯುತ್ತೇವೆ.

ಒಂದು ವೇಳೆ ವಿಮಾ ಕಂಪನಿಯು ನಿರಾಕರಿಸಿದರೆ ಅಥವಾ ವಿಮಾ ಕಂಪನಿಯ ಜೊತೆಗೆ ಯಾವುದೇ ಒಪ್ಪಂದ ಇಲ್ಲದಿದ್ದರೆ ಗ್ರಾಹಕನು ಆಸ್ಪತ್ರೆ ಬಿಲ್‌ಗಳನ್ನು ತನ್ನದೇ ಪಾಕೆಟ್‌ನಿಂದ ಪಾವತಿ ಮಾಡಬೇಕು ಮತ್ತು ಮರುಪಾವತಿಗೆ ಕ್ಲೈಮ್ ಅರ್ಜಿಗಳು ಹಾಗೂ ಬಿಲ್‌ಗಳನ್ನು ಸಲ್ಲಿಸಬೇಕು. ಇದನ್ನು ನಾವು ಮರುಪಾವತಿ ಕ್ಲೈಮ್ ಎಂದು ಕರೆಯುತ್ತೇವೆ.

ಇಂದಿನ ದಿನಮಾನಗಳಲ್ಲಿ ಶೇ.55ರಷ್ಟು ಗ್ರಾಹಕರು ನಗದುರಹಿತ ಕ್ಲೈಮ್‌ಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಉಳಿದವರು ಮರುಪಾವತಿ ಕ್ಲೈಮ್‌ಗಳಿಗಾಗಿ ಅರ್ಜಿಗಳನ್ನು ಸಲ್ಲಿಸುತ್ತಾರೆ.ಅವರು ವಿಮಾ ಕಂಪನಿಯ ಆಸ್ಪತ್ರೆ ಜಾಲದಿಂದ ಹೊರಗಡೆ ಇರುವ ಆಸ್ಪತ್ರೆಗಳಲ್ಲಿ ದಾಖಲಾಗಿರಬಹುದು.ಇದು ಅವರಿಗೆ ತೀವ್ರ ಹಣಕಾಸು ಒತ್ತಡವನ್ನು ತರಿಸಬಹುದು ಹಾಗೂ ಇಡೀ ಪ್ರಕ್ರಿಯೆ ಸುದೀರ್ಘ ಹಾಗೂ ಪ್ರಯಾಸಕರವಾಗಿ ಪರಿಣಮಿಸಬಹುದು.ಹಾಗಾಗಿ ಕ್ಲೈಮ್ ಮಾಡುವ ಇಡೀ ಪ್ರಕ್ರಿಯೆಯನ್ನು ಸಂಘರ್ಷರಹಿತವಾಗಿ ಮಾಡುವುದು ಅತ್ಯಗತ್ಯ.ಇದ–ರಿಂದ ಗ್ರಾಹಕರಿಗೆ ಸಹನೀಯ ಅನುಭವವಾಗುವುದು ಮಾತ್ರವಲ್ಲದೆ ಇಡೀ ವ್ಯವಸ್ಥೆಯಲ್ಲಿ ಉತ್ತಮ ನಂಬಿಕೆ ಹುಟ್ಟಲು ಸಾಧ್ಯವಾಗುತ್ತದೆ.

ಎಲ್ಲೆಡೆ ನಗದುರಹಿತ ವ್ಯವಸ್ಥೆ ಎಂದರೆ ಏನು?ಪ್ರಸ್ತುತ ಗ್ರಾಹಕನು ಆಸ್ಪತ್ರೆಗೆ ದಾಖಲಾದರೆ ಆ ಆಸ್ಪತ್ರೆ ವಿಮಾದಾರರ ಜೊತೆ ಒಪ್ಪಂದ ಮಾಡಿಕೊಂಡಿದ್ದರೆ ಮಾತ್ರ ನಗದುರಹಿತ ಚಿಕಿತ್ಸೆ ಲಭ್ಯವಾಗುತ್ತದೆ.

ಐಆರ್‌ಡಿಎಐ ನಿರ್ದೇಶನದ ಪ್ರಕಾರ ಎಲ್ಲ ವಿಮಾ ಕಂಪನಿಗಳು ಆಸ್ಪತ್ರೆಗಳಲ್ಲಿ ನಗದುರಹಿತ ಕ್ಲೈಮ್ ಸೌಲಭ್ಯವನ್ನು ಒದಗಿಸಲು ಶ್ರಮಿಸುತ್ತಿವೆ. ನಿವಾ ಬುಪಾ ಹೆಲ್ತ್, ಕೇರ್ ಹೆಲ್ತ್ ಮತ್ತು ಮಣಿಪಾಲ್ ಸಿಗ್ನಾ ಹೆಲ್ತ್ ಇನ್ಸೂರೆನ್ಸ್ ಕಂಪನಿಗಳು ಗ್ರಾಹಕರಿಗೆ ಎಲ್ಲೆಡೆ ನಗದುರಹಿತ ಸೌಲಭ್ಯಗಳನ್ನು ಒದಗಿಸುತ್ತಿವೆ. ಇನ್ನು ಕೆಲವು ವಿಮಾ ಕಂಪನಿಗಳು ಕೆಲವು ಸ್ಥಳಗಳಲ್ಲಿ ಈ ಸೌಲಭ್ಯ ಒದಗಿಸುತ್ತಿದ್ದು ಅದನ್ನು ಶೀಘ್ರ ದೇಶಾದ್ಯಂತ ವಿಸ್ತರಿಸುವುದಾಗಿ ಹೇಳಿವೆ. ಇದರಿಂದ ಗ್ರಾಹಕರು ತೃಪ್ತರಾಗುತ್ತಾರೆ ಮತ್ತು ಭಾರತದಲ್ಲಿ ಆಹಾರ ವಿಮೆಯನ್ನು ಪಡೆಯುವವರ ಸಂಖ್ಯೆ ಹೆಚ್ಚಾಗಲಿದೆ.

ಕೆಲವು ವಿಮಾ ಕಂಪನಿಗಳು ಸಾವಿರಕ್ಕೂ ಹೆಚ್ಚು ಆಸ್ಪತ್ರೆಗಳ ಜೊತೆ ನೆಟ್‌ವರ್ಕ್ ಒಪ್ಪಂದ ಮಾಡಿಕೊಂಡಿದ್ದರೆ ಇನ್ನು ಕೆಲವು ಸಂಸ್ಥೆಗಳು ನಾಲ್ಕು ಸಾವಿರದಿಂದ ಐದು ಸಾವಿರ ನೆಟ್‌ವರ್ಕ್ ಆಸ್ಪತ್ರೆಗಳ ಜೊತೆಗೆ ಒಪ್ಪಂದ ಮಾಡಿಕೊಂಡಿವೆ. ಆದರೆ ಈಗ ಮಾಡುತ್ತಿರುವ ಪ್ರಯತ್ನಗಳು ಸಫಲವಾದರೆ ಸುಮಾರು 40 ಸಾವಿರ ಆಸ್ಪತ್ರೆಗಳಲ್ಲಿ ಗ್ರಾಹಕರಿಗೆ ನಗದುರಹಿತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

## ಸೌಲಭ್ಯ ಪಡೆಯುವ ಹಂತಗಳು

1.ಮುಂಚಿತವಾಗಿಯೇ ವಿಮಾ ಕಂಪನಿಗೆ ಕ್ಲೈಮ್‌ನ ಮಾಹಿತಿಯನ್ನು ನೀಡುವುದು.

2.ಆಸ್ಪತ್ರೆಗೆ ದಾಖಲಾಗುವ ಬಗ್ಗೆ ಮೊದಲೇ ಯೋಜಿಸಿದ್ದರೆ ಹಾಗೆ ಮಾಡುವ 48 ಗಂಟೆಗಳಿಗೂ ಮೊದಲು ಮಾಹಿತಿ ನೀಡಿ.

3.ತುರ್ತಾಗಿ ಆಸ್ಪತ್ರೆಗೆ ದಾಖಲಾಗಬೇಕಿದ್ದರೆ 24 ಗಂಟೆಗಳೊಳಗೆ ಮಾಹಿತಿ ನೀಡಿ.

4.ಒಂದು ವೇಳೆ ಆಸ್ಪತ್ರೆಯು ನೆಟ್‌ವರ್ಕ್ ಪಟ್ಟಿಯಲ್ಲಿ ಇಲ್ಲದೇ ಹೋದರೆ ನಗದು ರಹಿತ ಸೇವೆಯನ್ನು ಆಸ್ಪತ್ರೆಯು ಒಪ್ಪಬೇಕಾಗುತ್ತದೆ.

5.ಒಂದು ವೇಳೆ ಆಸ್ಪತ್ರೆಯು ನೆಟ್‌ವರ್ಕ್ ಪಟ್ಟಿಯಲ್ಲಿ ಇಲ್ಲದೇ ಇದ್ದರೆ ವಿಮಾ ಕಂಪನಿಗಳು ನಗದು ರಹಿತ ಸೌಲಭ್ಯಗಳು ಲಭ್ಯವಿರುವ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತೆ ಸಲಹೆ ಮಾಡಬಹುದು.

6.ಇವೆಲ್ಲ ಪ್ರಯತ್ನಗಳ ಹೊರತಾಗಿಯೂ ಆಸ್ಪತ್ರೆಯು ವಿಮಾದಾರರ ಮನವಿಗೆ ಸ್ಪಂದಿಸದೇ ಇದ್ದರೆ ಮತ್ತು ಗ್ರಾಹಕರು ಈ ಸೌಲಭ್ಯ ಲಭ್ಯವಿರುವ ಇನ್ನೊಂದು ಆಸ್ಪತ್ರೆಗೆ ತೆರಳಲು ನಿರಾಕರಿಸಿದರೆ ಗ್ರಾಹಕನು ಮರುಪಾವತಿ ಕ್ಲೈಮ್ ಆಯ್ಕೆ ಮಾಡಿಕೊಳ್ಳಬಹುದು.

ಈ ಒಪ್ಪಂದಕ್ಕೆ ಒಳಪಡದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ ಕ್ಲೈಮ್ ಪಾವತಿ ಮಾಡಲು ಸಾಧ್ಯವಾಗುವುದಿಲ್ಲ. ಈ ಸೌಲಭ್ಯದಿಂದ ಹೊರಗಿರುವ ಆಸ್ಪತ್ರೆಗಳ ಪಟ್ಟಿಯು ಆಯಾ ವಿಮಾ



ಕಂಪನಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

**ಸಾರಾಂಶ:** ಐಆರ್‌ಡಿಎಐ ಕೈಗೊಂಡಿರುವ ಈ ಉಪಕ್ರಮದಿಂದಾಗಿ ಗ್ರಾಹಕರು ಆಯ್ಕೆ ಮಾಡಿಕೊಂಡ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅರ್ಹತೆಯನ್ನು ಪಡೆಯಲಿದ್ದಾರೆ. ವಿಮಾದಾರರ ನೆಟ್‌ವರ್ಕ್‌ನಲ್ಲಿ ಆ ಆಸ್ಪತ್ರೆ ಇಲ್ಲದೇ ಇದ್ದರೂ ಕೂಡ ನಗದುರಹಿತ ಸೌಲಭ್ಯ ಲಭ್ಯವಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಆರೋಗ್ಯ ವಿಮೆಯನ್ನು ಆಯ್ಕೆ ಮಾಡಿಕೊಳ್ಳಲು ಉತ್ತೇಜನ ನೀಡುವ ಉದ್ದೇಶದ ಈ ಕ್ರಮ ವಂಚನೆಯನ್ನು ತಗ್ಗಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯೂ ಆಗಲಿದೆ. ಇತ್ತೀಚಿನ ದಿನಗಳಲ್ಲಿ ವಿಮಾ ಉದ್ಯಮವನ್ನು ಕಾಡುತ್ತಿರುವ ವಂಚನೆಯನ್ನು ತಗ್ಗಿಸಿ ಗ್ರಾಹಕರಲ್ಲಿ ವಿಶ್ವಾಸ–ನಂಬಿಕೆ ಮರುಕಳಿಸುವಂತೆ ಮಾಡಲಿದೆ.

‘ಎಲ್ಲೆಡೆ ನಗದುರಹಿತ’ ಸೌಲಭ್ಯ ಸಂಪೂರ್ಣ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಾಗ ಗ್ರಾಹಕರಿಗೆ ಹೆಚ್ಚಿನ ಪ್ರಯೋಜನವಾಗಲಿದೆ.

* ಗ್ರಾಹಕರು ಆಸ್ಪತ್ರೆ ಬಿಲ್‌ಗಳನ್ನು ಪಾವತಿಸಲು ಹಣದ ವ್ಯವಸ್ಥೆಗೆ ಚಿಂತಿಸಬೇಕಾಗಿಲ್ಲ.

*ನಗದುರಹಿತ ಆಸ್ಪತ್ರೆಯಲ್ಲಿ ದಾಖಲಾಗಲು ದೂರದೂರಿಗೆ ಪ್ರಯಾಣ ಮಾಡಬೇಕಾಗಿಲ್ಲ.

*ನಗದುರಹಿತ ಆಸ್ಪತ್ರೆಯಲ್ಲಿ ದಾಖಲಾಗಲು ಆಸ್ಪತ್ರೆ/ವೈದ್ಯರನ್ನು ಬದಲಿಸಬೇಕಾದ ಅಗತ್ಯವಿಲ್ಲ.

*ವಿಶ್ವದರ್ಜೆಯ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಸಾಧ್ಯ.

ಅಂತಿಮವಾಗಿ ಇಂತಹ ಕ್ರಮದಿಂದ ಗ್ರಾಹಕರು ತಮ್ಮ ಆರೋಗ್ಯ ವಿಮಾ ಪಾಲಿಸಿಯಿಂದ ಹೆಚ್ಚಿನ ಪ್ರಯೋಜನವನ್ನು ಪಡೆಯಲು ಸಾಧ್ಯವಾಗುತ್ತದೆ.

INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಹಕ್ಕು ನಿರಾಕರಣೆ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com

ಎಲ್ಲ ದೌರ್ಬಲ್ಯಗಳನ್ನು ಮೀರಿ ಸಾಗಿದಾಗಲೇ ನಿಮ್ಮದೇ ಆದ ಶಕ್ತಿ ಹೊರಹೊಮ್ಮಲು ಸಾಧ್ಯ